ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

**Bangalore Mysore Infrastructure Corridor Area Planning Authority**

ನಂ. 5, 2ನೇ ಮಹಡಿ, ಲೂಪ್‌ಲೇನ್,
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 009.
ಫೋನ್ : 080 22341230

No. 5, Second Floor,
Looplane, Race Course Road, Bengaluru - 560 009
Tel : 080 22341230

ಸಂಖ್ಯೆ: ಬಿಎಂಐಸಿಎಪಿಎ/ಕ.ವಿ/10/2015-16

ದಿನಾಂಕ: 21 APR 2016

## ಪ್ರಾರಂಭಿಕ ಪ್ರಮಾಣ ಪತ್ರ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 15(1)ರಡಿಯಲ್ಲಿ)

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಮಲ್ಲಸಂದ್ರ ಗ್ರಾಮದ ಸ.ನಂ:18/1ಎ1ರ ಪೈಕಿ 0ಎ-30ಗು, 18/1ಎ13ರಲ್ಲಿ 03ಎಕರೆ ಮತ್ತು ಸ.ನಂ:22ರಲ್ಲಿ 14ಎ-28ಗು ಒಟ್ಟು 18ಎ-18ಗು (ಖಾತಾ ಸಂಖ್ಯೆ:150200300101500854) ವಿಸ್ತೀರ್ಣದ ನಿವೇಶನದಲ್ಲಿ ತಳ+ನೆಲ+ಮೂರು ಮಹಡಿಗಳ ವಸತಿ ಅಪಾರ್ಟ್‌ಮೆಂಟ್ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ಕೋರಿರುವ ಬಗ್ಗೆ.

ಉಲ್ಲೇಖ:
1. ಅರ್ಜಿದಾರರ ಮನವಿ ದಿನಾಂಕ:06.01.2016.
2. ದಿನಾಂಕ:08.01.2016ರಂದು ಜರುಗಿದ ಪ್ರಾಧಿಕಾರದ 49ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:49.7.1
3. ಈ ಕಛೇರಿ ಸಮಸಂಖ್ಯೆ ಪತ್ರದ ದಿನಾಂಕ:13.04.2016
4. ಹೆಚ್.ಡಿ.ಎಫ್.ಸಿ ಬ್ಯಾಂಕ್, ಡ್ರಾವಿ ಶಾಖೆ, ಬೆಂಗಳೂರು, ಬೇಡಿಕೆ ಹುಂಡಿ ಸಂಖ್ಯೆ: 704653, ದಿನಾಂಕ:15.04.2016.

*****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ಪತ್ರದಲ್ಲಿ ಮೆ॥ ಗೋದ್ರೇಜ್ ಹೋಮ್ಸ್ ಕನ್‌ಸ್ಟ್ರಕ್ಷನ್ ಪ್ರೈ.ಲಿ., ಇವರು ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಮಲ್ಲಸಂದ್ರ ಗ್ರಾಮದ ಸ.ನಂ:18/1ಎ1ರ ಪೈಕಿ 0ಎ-30ಗು, 18/1ಎ13ರಲ್ಲಿ 03ಎಕರೆ ಮತ್ತು ಸ.ನಂ:22ರಲ್ಲಿ 14ಎ-28ಗು ಒಟ್ಟು 18ಎ-18ಗು (ಖಾತಾ ಸಂಖ್ಯೆ:150200300101500854) ವಿಸ್ತೀರ್ಣದಲ್ಲಿ ಪ್ರಾಧಿಕಾರದಿಂದ ಅನುಮೋದನೆಯಾದ ಏಕ ನಿವೇಶನ ವಸತಿ ವಿನ್ಯಾಸದಲ್ಲಿ ತಳ+ನೆಲ+ಮೂರು ಮಹಡಿಗಳ ವಸತಿ ಅಪಾರ್ಟ್‌ಮೆಂಟ್ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿರುತ್ತಾರೆ.

ಸದರಿ ಜಮೀನುಗಳು ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಗಳಲ್ಲಿ ವಸತಿ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ. ಸರ್ಕಾರದ ಪತ್ರ ಸಂಖ್ಯೆ: ನಅಇ/92/ಬೆಂರೂಪ್ರಾ/06, ದಿನಾಂಕ:25.10.2006ರಲ್ಲಿ ಪ್ರಸ್ತಾಪಿತ ಮಲ್ಲಸಂದ್ರ ಗ್ರಾಮದ ಸ.ನಂ:18/1ಎ1 ಮತ್ತು ಸ.ನಂ:22ರಲ್ಲಿನ ಜಮೀನುಗಳ ವಿನ್ಯಾಸ ಅನುಮೋದನೆ ನೀಡುವ ಪ್ರಕರಣದಲ್ಲಿ ಒಟ್ಟಾರೆ ವಿಸ್ತೀರ್ಣದಲ್ಲಿನ ಹೆಚ್ಚಿನ ಕ್ಷೇತ್ರವು ಬಿಎಂಐಸಿಎಪಿಎಗೆ ಒಳಪಟ್ಟಿರುವುದರಿಂದ, ಬಿಎಂಐಸಿಎಪಿಎಯ ವಲಯ ನಿಯಮಾವಳಿಗಳನ್ನು ಅನುಸರಿಸುವಂತೆ ತಿಳಿಸಲಾಗಿದೆ.

ಪ್ರಸ್ತಾವನೆಯನ್ನು ಉಲ್ಲೇಖ(2)ರ ಪ್ರಾಧಿಕಾರದ 49ನೇ ಸಭೆಯಲ್ಲಿ ಮಂಡಿಸಲಾಗಿದ್ದು, *"ದಿನಾಂಕ:03.10.2015ರಂದು ಪ್ರಾಧಿಕಾರದಿಂದ ಏಕ ನಿವೇಶನ ವಸತಿ ವಿನ್ಯಾಸ ನಕ್ಷೆ ಅನುಮೋದನೆಯಾಗಿರುವುದನ್ನು ಹಾಗು ಅರ್ಜಿದಾರರು ಕಟ್ಟಡ ನಕ್ಷೆಯಲ್ಲಿ ತಳಮಹಡಿಯನ್ನು ಪ್ರಸ್ತಾಪಿಸಿರುವ ಬಗ್ಗೆ ಚರ್ಚಿಸಲಾಯಿತು. ವಲಯ*

*ನಿಯಮಾವಳಿಯಲ್ಲಿ ತಳ ಮಹಡಿಗೆ ಅನುಮೋದಿಸಲು ಕನಿಷ್ಠ 1000ಚ.ಮೀ ವಿಸ್ತೀರ್ಣದ ನಿವೇಶನ ಹಾಗೂ ಕನಿಷ್ಠ 12ಮೀ ಅಗಲದ ರಸ್ತೆ ಸಂಪರ್ಕ ಬೇಕಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.*

*ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಗ್ಗಲೀಪುರ ಗ್ರಾಮ ಪಂಚಾಯಿತಿರವರು ಜಮೀನಿನ ಮುಂಭಾಗದಲ್ಲಿ ಸರಾಸರಿ 13ಮೀ ಅಗಲದ ರಸ್ತೆ ಇರುವ ಬಗ್ಗೆ ದೃಢೀಕರಣ ಪತ್ರ ನೀಡಿರುವ ಬಗ್ಗೆ ಸಭೆಯು ಗಮನಿಸಿತು.*

*ಅರ್ಜಿದಾರರು ಏಕ ನಿವೇಶನ ವಿನ್ಯಾಸದಲ್ಲಿ ರಸ್ತೆ ವಿಸ್ತರಣೆಗಾಗಿ ಕಾಯ್ದಿರಿಸಿರುವ ಜಾಗವನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿದ ನಂತರ ಹಾಗೂ ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ವಿದ್ಯುತ್ ಸರಬರಾಜು ನಿಗಮ ನಿಯಮಿತ, MOEF ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ನಿರಾಕ್ಷೇಪಣಾ ಪಡೆದು ಸಲ್ಲಿಸಿದ ನಂತರ, ತಳ ಮಹಡಿಯನ್ನು ಒಳಗೊಂಡಂತೆ 9.30ಮೀ ಅಗಲದ ರಸ್ತೆಗೆ ನಿಗಧಿಪಡಿಸಿರುವ F.A.R ಮಿತಿಗೊಳಿಸಿ ವಲಯ ನಿಯಮಾವಳಿಯಂತೆ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಸಭೆಯು ನಿರ್ಣಯಿಸಿತು".*

ಪ್ರಾಧಿಕಾರದ ತೀರ್ಮಾನದನ್ವಯ ನಿಗದಿತ ಶುಲ್ಕಗಳನ್ನು ಪಾವತಿಸಲು ಉಲ್ಲೇಖ(3)ರಲ್ಲಿ ತಿಳಿಸಿದ ಮೇರೆಗೆ ಉಲ್ಲೇಖ(4)ರಲ್ಲಿ ಅರ್ಜಿದಾರರು ರೂ.2,95,200/-ಗಳ ಶುಲ್ಕವನ್ನು ಪಾವತಿಸಿ, ಪ್ರಾಧಿಕಾರದ ನಿರ್ಣಯದಂತೆ ಅಗತ್ಯ ದಾಖಲೆಗಳನ್ನು ಸಲ್ಲಿಸಿರುತ್ತಾರೆ. ಆದರೆ, ಪ್ರಸ್ತಾಪಿತ ನಿವೇಶನದಲ್ಲಿ ವಿದ್ಯುತ್ ಸರಬರಾಜು ಮಾಡುವ ಕುರಿತು ಸಕ್ಷಮ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರವನ್ನು ಸ್ಥಳೀಯ ಸಂಸ್ಥೆಯಿಂದ ಲೈಸೆನ್ಸ್ ಪಡೆಯುವ ಮುನ್ನ ಪಡೆದು ಸಲ್ಲಿಸುವುದಾಗಿ ದಿನಾಂಕ:20.04.2016ರಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಮಲ್ಲಸಂದ್ರ ಗ್ರಾಮದ ಸ.ನಂ:18/1ಎ1ರ ಪೈಕಿ 0ಎ-30ಗು, 18/1ಎ13ರಲ್ಲಿ 03ಎಕರೆ ಮತ್ತು ಸ.ನಂ:22ರಲ್ಲಿ 14ಎ-28ಗು ಒಟ್ಟು 18ಎ-18ಗು (ಖಾತಾ ಸಂಖ್ಯೆ:150200300101500854) ವಿಸ್ತೀರ್ಣದಲ್ಲಿ ಪ್ರಾಧಿಕಾರದಿಂದ ಅನುಮೋದನೆಯಾದ ಏಕ ನಿವೇಶನದಲ್ಲಿ ಒಟ್ಟು 16 ತಳ+ನೆಲ+ಮೂರು ಮಹಡಿಗಳ ಅಪಾರ್ಟ್‌ಮೆಂಟ್ ಕಟ್ಟಡ ಹಾಗೂ ತಳ+ನೆಲ+ಎರಡು ಮಹಡಿಗಳ ಕ್ಲಬ್‌ಹೌಸ್ ಕಟ್ಟಡ ನಿರ್ಮಾಣ ಮಾಡಲು ಕೆಟಿಸಿಪಿ ಕಾಯ್ದೆ, 1961ರ ಕಲಂ 15(1)ರಡಿಯಲ್ಲಿ, ವಲಯ ನಿಯಮಾವಳಿಯ ಕೆಳಕಂಡ ಅಂಶ ಮತ್ತು ಷರತ್ತುಗಳೊಂದಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗಿದೆ.

| ಕ್ರ ಸಂ | ವಿವರಗಳು | ವಲಯ ನಿಯಮಾವಳಿಯಂತೆ | ಸಲ್ಲಿಸಿರುವ ನಕ್ಷೆಯಂತೆ |
|---|---|---|---|
| 1. | <u>ಭೂ ಉಪಯೋಗ</u> | | |
| | 1. ಮಹಾಯೋಜನೆಯಂತೆ | ವಸತಿ | ವಸತಿ |
| | 2. ಭೂ ಪರಿವರ್ತನೆ ಆದೇಶದಂತೆ | ವಸತಿ | ವಸತಿ |
| 2. | <u>ನಡುಜಾಗಗಳು</u> | | |
| | ಮುಂಭಾಗ | 5.0ಮೀ | 5.0ಮೀ |
| | ಹಿಂಭಾಗ | 5.0ಮೀ | 5.0ಮೀ |

| | | | |
|---|---|---|---|
| | ಬಲಗಡೆ<br>ಎಡಗಡೆ | 5.0ಮೀ<br>5.0ಮೀ | 5.0ಮೀ<br>5.0ಮೀ |
| 3. | ನಿವೇಶನದ ವಿಸ್ತೀರ್ಣ | 4000.00ಚ.ಮೀ ಗಿಂತ ಹೆಚ್ಚು | 74664.45ಚ.ಮೀ |
| 4. | ಆವರಿಸುವಿಕೆ | 50% | 38.32% |
| 5. | ಅನುಪಾತ | 1.25 | 1.245 |
| 6. | ವಸತಿ ಘಟಕಗಳ ಸಂಖ್ಯೆ | – | 889 |
| 7. | ಕಟ್ಟಡದ ಎತ್ತರ | 15ಮೀ | 12.25ಮೀ |
| 8. | ವಾಹನ ನಿಲುಗಡೆ | 934 | 950 |

1) *ಪ್ರಾಧಿಕಾರದಿಂದ ಅಪಾರ್ಟ್‌ಮೆಂಟ್ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪಡೆದ ನಂತರ ಕಗ್ಗಲೀಪುರ ಗ್ರಾಮ ಪಂಚಾಯಿತಿಯಿಂದ ಕಟ್ಟಡ ಪರವಾನಿಗೆ / ಲೈಸೆನ್ಸ್ ಪಡೆಯತಕ್ಕದ್ದು.*
2) **ದಿನಾಂಕ:20.04.2016ರಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರದನ್ವಯ ಪ್ರಸ್ತಾಪಿತ ನಿವೇಶನದಲ್ಲಿ ವಿದ್ಯುತ್ ಸರಬರಾಜು ಮಾಡುವ ಕುರಿತು ಸಕ್ಷಮ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರವನ್ನು ಸ್ಥಳೀಯ ಸಂಸ್ಥೆಗೆ ಸಲ್ಲಿಸಿದ *ನಂತರವಷ್ಟೇ ಕಗ್ಗಲೀಪುರ ಗ್ರಾಮ ಪಂಚಾಯಿತಿಯಿಂದ ಕಟ್ಟಡ ಪರವಾನಿಗೆ / ಲೈಸೆನ್ಸ್ ನೀಡುವ ಷರತ್ತಿಗೊಳಪಡಿಸಿದೆ.***
3) *ನಿವೇಶನದಲ್ಲಿ ಮಳೆ ನೀರು ಕೊಯ್ಲಿನ ಸೂಕ್ತ ವ್ಯವಸ್ಥೆಯನ್ನು ಅಳವಡಿಸತಕ್ಕದ್ದು ಹಾಗೂ ಸೋಲಾರ್ ವ್ಯವಸ್ಥೆಯನ್ನು ಅಳವಡಿಸತಕ್ಕದ್ದು.*
4) *ಈ ಅನುಮತಿಯು ಪ್ರಾರಂಭಿಕ ಪ್ರಮಾಣ ಪತ್ರ ನೀಡಿದ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಮಾತ್ರ ಜಾರಿಯಲ್ಲಿರುತ್ತದೆ. ತದನಂತರ, ನವೀಕರಣ/ಮಾರ್ಪಡಿತ ಬೇಕಾದಲ್ಲಿ ಅನುಮತಿ ಅವಧಿ ಮುಗಿಯುವ ಮೊದಲೇ ಈ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು.*
5) *ಸಂಬಂಧಪಟ್ಟ ಪ್ರಾಧಿಕಾರ/ಸ್ಥಳೀಯ ಸಂಸ್ಥೆಯ ಸಿಬ್ಬಂದಿಗಳ ಪರಿಶೀಲನೆಗಾಗಿ ನಿವೇಶನ ಸ್ಥಳದಲ್ಲಿ ಅನುಮೋದಿತ ನಕ್ಷೆಯು ಸದಾಕಾಲ ಲಭ್ಯವಿರತಕ್ಕದ್ದು.*
6) *ಕಟ್ಟಡ ರಚನೆಯನ್ನು IS 1893–2002ರನ್ವಯ ಭೂಕಂಪ ನಿರೋದಕ ತಂತ್ರಜ್ಞಾನವನ್ನು ಬಳಸಿ ರಚಿಸುವುದರ ಜೊತೆಗೆ ಅದರಂತೆ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು.*
7) *ಈ ಪ್ರಸ್ತಾವಿತ ಕಟ್ಟಡ ನಕ್ಷೆ ಅನುಮೋದನೆಗೆ ಈಗಾಗಲೇ ವಿಧಿಸಿರುವ ಶುಲ್ಕಗಳಲ್ಲದೆ, ಸರ್ಕಾರವು ಆಗಿಂದಾಗ್ಗೆ ಹೊರಡಿಸಬಹುದಾದ ಆದೇಶಗಳಂತೆ ವಿಧಿಸಬಹುದಾದ ಶುಲ್ಕಗಳನ್ನು ಅರ್ಜಿದಾರರು ಭರಿಸುವ ಷರತ್ತಿಗೆ ಒಳಪಟ್ಟಿರುತ್ತದೆ.*
8) *ಅನುಮೋದಿತ ಕಟ್ಟಡ ನಕ್ಷೆಯಂತೆಯೇ ಕಟ್ಟಡವನ್ನು ನಿರ್ಮಿಸತಕ್ಕದ್ದು ಹಾಗೂ ಕಟ್ಟಡವನ್ನು ಅನುಮತಿ ನೀಡಲಾದ ಉಪಯೋಗಕ್ಕೆ ಮಾತ್ರವಲ್ಲದೆ ಬೇರೆ ಉದ್ದೇಶಗಳಿಗೆ ಉಪಯೋಗಿಸಬಾರದು.*
9) *ಇದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರಡಿಯಲ್ಲಿ ಬಿ.ಎಂ.ಐ.ಸಿ.ಪಿ ಯೋಜನಾ ಪ್ರಾಧಿಕಾರದಿಂದ ಮಾತ್ರ ನೀಡಲಾದ ಪ್ರಾರಂಭಿಕ ಪ್ರಮಾಣ ಪತ್ರವಾಗಿರುತ್ತದೆ. ಇತರೆ ಕಾಯ್ದೆಗಳನ್ವಯ ಅವಶ್ಯವಿರುವ ಅನುಮತಿಯನ್ನು ಪಡೆಯದೆ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳತಕ್ಕದ್ದಲ್ಲ.*

10) ಈ ಅನುಮತಿ ಕೋರಿ ಪ್ರಾಧಿಕಾರಕ್ಕೆ ಅರ್ಜಿದಾರರು ಸಲ್ಲಿಸಿರುವ ಮಾಹಿತಿಗಳು/ದಾಖಲೆಗಳು ಯಾವುದೇ ವೇಳೆ ತಪ್ಪು ಎಂದು ತಿಳಿದು ಬಂದಲ್ಲಿ ಹಾಗೂ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಯಾವುದಾದರೂ ದಾವೆಗಳಿದ್ದಲ್ಲಿ ಈ ಪ್ರಾರಂಭಿಕ ಪ್ರಮಾಣ ಪತ್ರವು ಅನೂರ್ಜಿತವಾಗಿದೆಯೆಂದು ಭಾವಿಸತಕ್ಕದ್ದು ಹಾಗೂ ಇದರಿಂದ ಉಂಟಾಗುವ ಆಗುಹೋಗುಗಳಿಗೆ ಈ ಪ್ರಾಧಿಕಾರವು ಹೊಣೆಯಾಗಿರುವುದಿಲ್ಲ.

11) ಕೆಎಸ್‌ಪಿಸಿಬಿ, ಬಿಡಬ್ಲ್ಯೂಎಸ್‌ಎಸ್‌ಬಿ, ಬೆಸ್ಕಾಂ ಸಂಸ್ಥೆಗಳಿಂದ ನೀಡಿರುವ ನಿರಾಕ್ಷೇಪಣಾ ಪತ್ರಗಳಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.

12) ಪ್ರಸ್ತಾಪಿತ ಯೋಜನೆಯಲ್ಲಿನ ಎಲ್ಲಾ ವಸತಿ ಘಟಕಗಳಿಗೂ ಕುಡಿಯುವ ನೀರಿಗಾಗಿ ಮತ್ತು ಇತರೆ ಉಪಯೋಗದ ಬಳಕೆಗಾಗಿ ಪ್ರತ್ಯೇಕವಾದ ಜೋಡಿ ಕೊಳಾಯಿ ವ್ಯವಸ್ಥೆಯನ್ನು (Dual Piping System) ಅಳವಡಿಸತಕ್ಕದ್ದು.

13) ಸದರಿ ವಸತಿ ಯೋಜನೆಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಸೂಕ್ತ ವ್ಯವಸ್ಥೆಯನ್ನು ಅಳವಡಿಸತಕ್ಕದ್ದು.

14) ಪ್ರಾಧಿಕಾರದಿಂದ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರ ಸಂಖ್ಯೆ: ಬಿಎಂಐಸಿಎಪಿಎ/23/ಕಟ್ಟಡ ವಿನ್ಯಾಸ/ಮಲ್ಲಸಂದ್ರ/116/2009-10, ದಿನಾಂಕ:11.01.2010ನ್ನು ರದ್ದುಪಡಿಸಲಾಗಿದೆ.

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 15(4)ರಂತೆ ಕ್ರಮ ಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ತಮ್ಮ ಗಮನಕ್ಕೆ ತರಲಾಗಿದೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ
ನಿರ್ದೇಶಕರು ಹಾಗೂ ಸದಸ್ಯ-ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

<u>ಪ್ರತಿಯನ್ನು:</u>

1. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಗ್ಗಲೀಪುರ ಗ್ರಾಮ ಪಂಚಾಯಿತಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಇವರಿಗೆ ಅನುಮೋದಿತ ಕಟ್ಟಡ ನಕ್ಷೆಯ 3 ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
2. ಶ್ರೀ ದಿನಕರ್ ಹೇರಿಕುದ್ರು ಮೆ॥ ಗೋದ್ರೇಜ್ ಹೋಮ್ಸ್ ಕನ್‌ಸ್ಟ್ರಕ್ಷನ್ ಪ್ರೈ.ಲಿ.ಪರವಾಗಿ, #80, ಹುಳ್ಕುಳ್ ಅಸೆಂಟ್, 2ನೇ ಕ್ರಾಸ್, ಲ್ಯಾವೆಲ್ಲಾ ರೋಡ್, ಬೆಂಗಳೂರು-560 001. ಇವರಿಗೆ ಅನುಮೋದಿತ ಕಟ್ಟಡ ನಕ್ಷೆಗಳೊಂದಿಗೆ ಕಳುಹಿಸಲಾಗಿದೆ.
3. ಕಛೇರಿ ಪ್ರತಿ.

2/4
ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ
ನಿರ್ದೇಶಕರು ಹಾಗೂ ಸದಸ್ಯ-ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

76 /va p.p.pt ltrs